



ಹೀಗೆ ಆದರೆ ಎಂದು ಊಹಿಸಿ ಮಗು ಬೇಡ ಎಂದು ನಿರ್ಧರಿಸುವವರು – ಹೀಗೆ ಅವರಿಗೆ ಅವರದೇ ಆದ ಕಾರಣಗಳಿವೆ. ‘ಮಕ್ಕಳನ್ನು ಹೆರಬೇಡಿ’ ಎಂಬುದು ಆಂದೋಲನವಾಗಿಯೂ ಜಗತ್ತಿನಾದ್ಯಂತ ಹಬ್ಬಿದೆ. ಅದರಲ್ಲಿ ಪ್ರಮುಖವಾದದ್ದು ‘ಆ್ಯಂಟಿ ನೈಟಲಿಸ್ಟ್’ ಅಭಿಯಾನ.

2019ರಿಂದ ‘ಆಂಟಿ ನೈಟಲಿಸ್ಟ್’ ಅಭಿಯಾನ ಭಾರತದಲ್ಲಿ ಆರಂಭವಾಗಿ ವಿದೇಶಗಳಿಗೂ ಹಬ್ಬಿವೆ. ಇವರು ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡು ‘ಮಕ್ಕಳನ್ನು ಹೆರಬೇಡಿ’ ಎಂಬ ಸಂದೇಶವನ್ನು ನೀಡುತ್ತಿದ್ದಾರೆ. ಈ ಅಭಿಯಾನದಲ್ಲಿ ಪ್ರಮುಖ ಪಾತ್ರವಹಿಸಿದ್ದು ಮುಂಬೈನ ಯುವಕ ರಾಫೆಲ್ ಸ್ಯಾಮ್ಯುವಲ್.

‘ಮನುಷ್ಯನ ಹುಟ್ಟಿಗೆ ಅರ್ಥವೇ ಇಲ್ಲ’ ಎಂಬುದು ರಾಫೆಲ್ ವಾದ. ಈತನ ತಂದೆ–ತಾಯಿ ವಕೀಲಿ ವೃತ್ತಿಯಲ್ಲಿರುವವರು. ರಾಫೆಲ್‌ಗೆ ತನ್ನ ಹುಟ್ಟಿನ ಬಗ್ಗೆ ಹುಟ್ಟಿದ ಜಿಜ್ಞಾಸೆಯೇ ಆ ಆಂದೋಲನ ಆರಂಭಿಸಲು ಪ್ರೇರಣೆಯಾಯಿತು. ‘ಇದು ಹತಾಶೆಯಿಂದ ಹುಟ್ಟಿದ್ದಲ್ಲ. ಈಗಿನ ಸಾಮಾಜಿಕ ಪರಿಸ್ಥಿತಿಗೆ ಪೂರಕವಾಗಿ ಹುಟ್ಟಿದ ಪ್ರಶ್ನೆಗಳು. ನನ್ನನ್ನು ಈಗ ಕೇಳಿದರೆ ನನಗೆ ಹುಟ್ಟಲು ಇಷ್ಟವೇ ಇರಲಿಲ್ಲ’ ಎನ್ನುವ ರಾಫೆಲ್, ‘ಯಾರನ್ನು ಕೇಳಿ ನನ್ನನ್ನು ಹೆತ್ತಿರಿ?’ ಎಂದು ತನ್ನ ತಂದೆ ತಾಯಿಯನ್ನೂ ಪ್ರಶ್ನಿಸಿದ್ದಾನೆ. ಪ್ರಶ್ನಿಸಿರುವುದಷ್ಟೇ ಅಲ್ಲ, ಜನಜಾಗೃತಿ ಮೂಡಿಸುವ ಸಲುವಾಗಿ ತಂದೆ ತಾಯಿಯ ವಿರುದ್ಧ ದಾವೆ ಹೂಡಿ – ‘ತನ್ನನ್ನು ಯಾಕೆ ಹೆತ್ತಿದ್ದೀರಿ? ಯಾರನ್ನು ಕೇಳಿ ಹೆತ್ತಿದ್ದೀರಿ?’ ಎಂಬ ಪ್ರಶ್ನೆಗಳನ್ನು ಕಾನೂನಿನ ಮೂಲಕ ಪ್ರಶ್ನಿಸಿದ್ದ. ಆ ಪ್ರಕರಣ ನ್ಯಾಯಾಲಯದಲ್ಲಿ ನಿಲ್ಲುವುದಿಲ್ಲ ಎಂದು ಅವನಿಗೂ ಅವನ ತಂದೆ ತಾಯಿಗೂ ಗೊತ್ತಿತ್ತು. ಆದರೂ ಆತನ ಈ ನಡೆಯನ್ನು ತಂದೆ ತಾಯಿ ಪ್ರೋತ್ಸಾಹಿಸಿದ್ದರು. ‘ಮಗುವನ್ನು ಹೆರಬೇಕೆ? ಬೇಡವೇ? ಎಂಬುದು ಸಂಗಾತಿಗಳಿಬ್ಬರ ನಿರ್ಧಾರ. ಹಾಗೆ ಒಂದು ಮಗು ಹುಟ್ಟುವ ಮೊದಲು ಕೇಳಲು ಅಸಾಧ್ಯ ಎಂಬುದು ನನಗೂ ತಿಳಿದಿದೆ. ಆದರೆ ನೈತಿಕವಾಗಿ ನಾವು ಈ ಪ್ರಶ್ನೆಗಳನ್ನು ಕೇಳಿಕೊಂಡರೆ ಹೆರುವ ಅಗತ್ಯ ಇಲ್ಲ ಎಂಬ ಉತ್ತರ ಸಿಗುತ್ತದೆ. ಮಕ್ಕಳು ತಂದೆ ತಾಯಿಯ ಹೂಡಿಕೆಯಲ್ಲ. ನಮ್ಮ ಶಿಕ್ಷಣಕ್ಕೆ ವ್ಯಯಿಸುವುದು, ನಂತರ ನಾವು ಉದ್ಯೋಗ ಮಾಡಿ ತಮ್ಮನ್ನು ನೋಡಿಕೊಳ್ಳಬೇಕು ಎಂಬ ನಿರೀಕ್ಷೆಯೇ ತಪ್ಪು. ಇದು ಹೇರಿಕೆ. ಮಕ್ಕಳಿಗೆ ಇಷ್ಟವಿದ್ದರೆ ತಂದೆ ತಾಯಿಗಳನ್ನು ನೋಡಿಕೊಳ್ಳಬಹುದು, ಇಷ್ಟವಿಲ್ಲದಿದ್ದರೆ ನೋಡಿಕೊಳ್ಳದೆ ಇರಬಹುದು. ನೋಡಿಕೊಳ್ಳದ ಪಕ್ಷದಲ್ಲಿ ಮಕ್ಕಳನ್ನು ದೂರುವುದು ಸರಿಯಲ್ಲ. ನಿಮ್ಮ ನಿರೀಕ್ಷೆಗಳನ್ನು ಈಡೇರಿಸಿಕೊಳ್ಳಲು ಮಕ್ಕಳನ್ನು ಹೆರುವುದಾದರೆ ಮೂಲದಲ್ಲಿಯೇ ನೀವು ತಪ್ಪು ಮಾಡುತ್ತಿದ್ದೀರಿ. ಒಂದು ಮಗುವನ್ನು ನಿಮ್ಮ ವೈಯಕ್ತಿಕ ಉದ್ದೇಶಕ್ಕಾಗಿ ಹೆತ್ತು ಹಿಂಸಿಸುತ್ತಿದ್ದೀರಿ ಎಂದರ್ಥ’ ಎನ್ನುವುದು ರಾಫೆಲ್ ವಾದ.

ಬೆಂಗಳೂರಿನಲ್ಲಿ ನಡೆದ ‘ಆ್ಯಂಟಿ ನೈಟಲಿಸ್ಟ್’ ಅಭಿಯಾನದ ಸಭೆಗೆ ರಾಫೆಲ್ ಹಾಜರಾಗಿದ್ದ. ಕರ್ನಾಟಕದಲ್ಲಿ ಈ ಅಭಿಯಾನದ ಪ್ರಮುಖ ಪ್ರಚಾರಕರ್ತರಲ್ಲಿ ಪ್ರತಿಮಾ ನಾಯ್ಕ್, ಅನುಗ್ರಹ್ ಶರ್ಮಾ ಮತ್ತು ಪ್ರಶಾಂತ್ ಕುಮಾರ್ ಪ್ರಮುಖರು.

‘ಮಾನವೀಯ ದೃಷ್ಟಿಯಿಂದ ಮಕ್ಕಳನ್ನು ಹೆರುವುದನ್ನು ನಿಲ್ಲಿಸಿ ಎನ್ನುವುದು ಆ್ಯಂಟಿ ನೈಟಲಿಸ್ಟ್ ಚಳವಳಿಯ ಮುಖ್ಯ ಉದ್ದೇಶ’ ಎನ್ನುತ್ತಾರೆ ಅವರು.

‘ತಡೆದುಕೊಳ್ಳಲಾಗದಷ್ಟು ಹಾನಿಯನ್ನು ನಾವು ಈಗಾಗಲೇ ಪ್ರಕೃತಿಗೆ ಮಾಡಿದ್ದೇವೆ. ಅದರಿಂದಾಗಿ ದೊಡ್ಡ ಪ್ರಮಾಣದಲ್ಲಿ ಪ್ರವಾಹಗಳು, ಭೂಕುಸಿತಗಳು, ಅತಿವೃಷ್ಟಿ, ಅನಾವೃಷ್ಟಿಗಳನ್ನು ಎದುರಿಸುತ್ತಿದ್ದೇವೆ. ಗಣಿಗಾರಿಕೆ, ಜಲಮಾಲಿನ್ಯದಿಂದಾಗಿ ಇಂದು ಶುದ್ಧ ಕುಡಿಯುವ ನೀರು ಸಿಗುತ್ತಿಲ್ಲ. ಇನ್ನು ನಮ್ಮ ಮುಂದಿನ ಪೀಳಿಗೆಗೆ ಯಾವ ಭರವಸೆ ನೀಡಬಹುದು? ವಾಯುಮಾಲಿನ್ಯದಿಂದಾಗಿ ಅನೇಕ ರೋಗಗಳನ್ನು ಸೃಷ್ಟಿಸಿದ್ದೇವೆ. ನಮ್ಮ ಮಕ್ಕಳಿಗೆ ಶುದ್ಧ ಗಾಳಿಯನ್ನು ನೀಡಲು ಸಾಧ್ಯವೆ? ಶಬ್ದ ಮಾಲಿನ್ಯ ಮಾನಸಿಕ ಒತ್ತಡವನ್ನು ಹೆಚ್ಚಿಸಿದೆ. ಆಹಾರವೂ ಕಲಬೆರಕೆಯಿಂದ ಕೂಡಿದೆ. ಆಹಾರ, ಗಾಳಿ, ನೀರು ಇವೆಲ್ಲ ಒಂದು ಮಗುವಿಗೆ ನಾವು ನೀಡಬೇಕಾದ ಮೂಲಭೂತ ಅವಶ್ಯಕತೆಗಳು. ಶುದ್ಧ ಗಾಳಿ, ನೀರು, ವಾತಾವರಣ ನಮಗೇನೆ ಸಿಗದಿರುವಾಗ ನಮ್ಮ ಮಕ್ಕಳಿಗೆ ನಾವು ಏನನ್ನು ನೀಡಬಹುದು? ಹಣದಿಂದ ಇವೆಲ್ಲವನ್ನೂ ಕೊಂಡುಕೊಳ್ಳಲು ಸಾಧ್ಯವಿಲ್ಲ ಅಲ್ಲವೆ? ಹೀಗಿರುವಾಗ ಮಕ್ಕಳನ್ನು ಹೆತ್ತು ಅವರನ್ನು ನಾವು ಈಗಿರುವ ಕಲುಷಿತ ವಾತಾವರಣದಲ್ಲಿ ಬೆಳೆಸುವುದು ನೈತಿಕವಾಗಿ ಸರಿಯೆ ಎಂಬುದನ್ನು ನಾವು ಪ್ರಶ್ನಿಸಿಕೊಳ್ಳಬೇಕು’ ಎನ್ನುತ್ತಾರೆ ಪ್ರತಿಮಾ.

‘ಇನ್ನೊಂದು ಮುಖ್ಯವಾದ ಸಮಸ್ಯೆ ಸ್ಪರ್ಧೆಯದು. ಇಂದಿನ ಪೀಳಿಗೆಯನ್ನು ನಾವು ಅನಾರೋಗ್ಯಕರ ಸ್ಪರ್ಧೆಗೆ ಒಡ್ಡಿ ಅವರ ಬಾಲ್ಯವನ್ನು ಕಸಿದುಕೊಳ್ಳುತ್ತಿದ್ದೇವೆ. ಓದು

### ಸ್ನೇಹಬಳಗವೇ ಊರುಗೋಲು

ನಾನು, ನನ್ನ ಹೆಂಡತಿ ಸೇರಿ ಮಗುಮುಕ್ತ ಜೀವನ ಶೈಲಿಯನ್ನು ಆಯ್ಕೆ ಮಾಡಿಕೊಂಡೆವು. ನಾವು ಆರ್ಥಿಕವಾಗಿ ಸುರಕ್ಷಿತರಾಗಿದ್ದರೂ ಮುಂದೆ ವಯಸ್ಸಾದ ಕಾಲಕ್ಕೆ ನಮ್ಮನ್ನು ನೋಡಿಕೊಳ್ಳುವವರು ಯಾರು ಎಂಬ ಪ್ರಶ್ನೆ ಕಾಡಿದ್ದಿದೆ. ಮಕ್ಕಳಾದರೆ, ಅವರು ನಮ್ಮನ್ನು ನೋಡಿಕೊಳ್ಳುತ್ತಾರೆ ಎಂಬ ಖಾತ್ರಿಯೂ ಇಲ್ಲ. ನನ್ನ ಅಣ್ಣಂದಿರ ಮಕ್ಕಳು ವಿದೇಶದಲ್ಲಿದ್ದಾರೆ. ಹಾಗಾಗಿ ಅವರು ನೋಡಿಕೊಳ್ಳುವ ನಿರೀಕ್ಷೆ ಇಟ್ಟುಕೊಳ್ಳುವ ಹಾಗಿರಲಿಲ್ಲ. ಹಾಗಾಗಿ ನಾವು ಮೂವರು ಗೆಳೆಯರು ಸೇರಿ ಒಂದೇ ಅಪಾರ್ಟ್‌ಮೆಂಟ್‌ನಲ್ಲಿ ಫ್ಲಾಟ್ ಖರೀದಿಸಿದ್ದೇವೆ. ನಾವು ಒಬ್ಬರ ಮೇಲೆ ಒಬ್ಬರು ಅವಲಂಬಿತರಾಗಿದ್ದೇವೆ.

**–ಸಲಿಲ್ ಚೇರನ್**
ಉದ್ಯಮಿ